MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

| Vol.49 | ENGLISH DAILY | Subscription Yearly - Rs. - | TUESDAY | 7-3-2023 |
|---|---|---|---|---|

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ದೇಶೀ ಪೌಲ್ಟ್ರಿ ಉದ್ಯಮ 2023–24 ರಲ್ಲಿ 8–10 ಶೇಕಡಾ ಪ್ರಗತಿ

ICRA ವರದಿಯ ಅನ್ವಯ 2023–24 ರಲ್ಲಿ ದೇಶೀ **ಪೌಲ್ಟ್ರಿ** ಉದ್ಯಮ 8–10 ಶೇಕಡ ಬೆಳವಣಿಗೆಯಾಗಲಿದೆಯನ್ನಲಾಗಿದೆ. ಸ್ಥಿರ ಬೇಡಿಕೆ, ಸಂಸ್ಕರಿತ ಚಿಕನ್ ಹಾಗೂ ಮೌಲ್ಯವರ್ಧಿತ ಉತ್ಪಾದನಾ ಬೆಳವಣಿಗೆಗಳಿಂದ ಉದ್ಯಮ ಪ್ರಗತಿ ಹೊಂದಲಿದೆಯೆನ್ನಲಾಗಿದೆ. ಆದರೂ ಪಶುಆಹಾರ ಕಚ್ಚಾ ವಸ್ತುಗಳ ದರ ಏರಿಳಿತಗಳಂದ ನಿರ್ವಹಣ ವೆಚ್ಚ ಹೆಚ್ಚಳದಿಂದ ಆದಾಯದಲ್ಲಿ ಏರಿಳಿತವಾಗಬಹುದೆನ್ನಲಾಗಿದೆ. 2022–23ರ ಪ್ರಥಮ 9 ತಿಂಗಳುಗಳಲ್ಲಿ ಜೋಳ ದರ 32 ಶೇಕಡಾ ಹೆಚ್ಚಳವಾಗಿದೆಯೆನ್ನಲಾಗಿದೆ. ಹೆಚ್ಚಳವಾಗುತ್ತಿರುವ ಸೋಯಾಬೀನ್ ದರವೂ ಪಶುಆಹಾರದ ದರ ಹೆಚ್ಚಳದಿಂದ ನಿರ್ವಹಣಾ ವೆಚ್ಚ ಅಧಿಕವಾಗುತ್ತಿದೆ.ಜಾಗತಿಕ ಹಕ್ಕಿ ಜ್ವರ ಹಾಗೂ ಇತರ ರೋಗಭಾಧೆಗಳಿಂದ ಬೇಡಿಕೆಯಲ್ಲಿ ವ್ಯತ್ಯಯವಾಗುತ್ತಿದೆ.

## ಫೀಡ್ಸ್‌ಗಳ ಅಧಿಕ ವೆಚ್ಚ ಸರಿದೂಗಿಸಲು ತರಕಾರಿ,ಹಣ್ಣುಗಳ ತ್ಯಾಜ್ಯಗಳ ಬಳಕೆ

ಪಶು ಆಹಾರದ ದರ ಹೆಚ್ಚಳದಿಂದ ನಿರ್ವಹಣಾ ವೆಚ್ಚ ನಿಯಂತ್ರಿಸಲು ತರಕಾರಿ ಹಾಗೂ ಹಣ್ಣುಗಳ ತ್ಯಾಜ್ಯ ಪಶು, ಪಕ್ಷಿ ಆಹಾರಕ್ಕಾಗಿ ಬಳಸಬಹುದೆನ್ನಲಾಗಿದೆ. ಹಾನಿಕಾರಕವಲ್ಲದ, ಟಾಕ್ಸಿನ್ ರಹಿತವಾದ ತರಕಾರಿ,ಹಣ್ಣು ತ್ಯಾಜ್ಯಗಳನ್ನು ಆಯ್ದು ಬಳಸಬೇಕಾಗುತ್ತದೆಯೆನ್ನಲಾಗಿದೆ.ಟೊಮೆಟೋ,ಕ್ಯಾರೆಟ್,ಬಟಾಟೆ,ಸಿಹಿಗೆಣಸು,ಕ್ಯಾಬೇಜ್ ಮುಂತಾದವುಗಳನ್ನು ಹಾಗೂ ಸೇಬು, ಬಾಳೆಹಣ್ಣು, ಕಿತ್ತಳೆ, ಮಾನಿನ ಹಣ್ಣಿನ ತಿರುಳು ಬಳಸಬಹುದಾಗಿದೆಯೆನ್ನಲಾಗಿದೆ. ಪಶು ಆಹಾರ ಬಳಸುವುದರೊಂದಿಗೆ, ಇವುಗಳನ್ನು ಪಶು, ಪಕ್ಷಿ ಆಹಾರವಾಗಿ ಬಳಸಿದಾಗ ನಿರ್ವಹಣೆ ವೆಚ್ಚ ನಿಯಂತ್ರಿಸಲು ಸಹಾಯವಾಗಬಹುದೆನ್ನಲಾಗಿದೆ.